**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.549/2022</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ಕೃಷ್ಣಾ ತಂದೆ ಬಸಪ್ಪ ಚಟ್ನಳಿ
ವಃ 31 ವರ್ಷ, ಉಃ ವ್ಯಾಪಾರ

2. ರಂಗನಾಥ ತಂದೆ ಬಸಪ್ಪ ಚಟ್ನಳಿ
ವಃ 30 ವರ್ಷ, ಉಃ ಡ್ರೈವರ ಕೆಲಸ **(Abated)**

3. ಬಸಪ್ಪ ತಂದೆ ಮಲ್ಲಪ್ಪ ಚಟ್ನಳಿ
ವಃ 60 ವರ್ಷ, ಉಃ ಒಕ್ಕಲುತನ ಕೆಲಸ

4. ನಿಲಮ್ಮ ಗಂಡ ಕೃಷ್ಣಾ ಚಟ್ನಳಿ
ವಃ 25 ವರ್ಷ, ಉಃ ಕೂಲಿ ಕೆಲಸ
ಎಲ್ಲರೂ ಸಾಃ ಉಡಗಿ,
ತಾಃ ಸೇಡಂ, ಜಿಃ ಕಲಬುರಗಿ.

----

**<u>ದೋಷಾರೋಪಣೆ</u>**

ನಾನು **ಶ್ರೀ ಬಾಲು**, ಬಿಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 07-03-2022 ರಂದು ಬೆಳಿಗ್ಗೆ 06-30 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಉಡಗಿ ಗ್ರಾಮದಲ್ಲಿಯ ಫಿರ್ಯಾದಿ ಮನೆಯ ಮುಂದೆ ರೋಡಿನ ಮೇಲೆ ಚಾಸಾ.1 ನೇದ್ದವನು ಹೊಲದಿಂದ ಮನೆಗೆ ಬರಲು ಟ್ರಾಕ್ಟರ ನಡೆಸಿಕೊಂಡು ಮನೆಯ ಮುಂದೆ ರೋಡಿನ ಮೇಲೆ ಬರುವಾಗ ಆರೋಪಿ.1 ರಿಂದ 4 ರವರು ಕೂಡಿಕೊಂಡು ಬಂದು ಚಾಸಾ.1 ನೇದ್ದವನಿಗೆ ದಿ. 06.03.2022 ರಂದು ಬಾಯಿಮಾತಿನ ಜಗಳ ಯಾಕೆ ಮಾಡಿದ್ದಿ ಅಂತಾ ಕೇಳಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 341 ಸಂಗಡ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಬಂದು, ಆರೋಪಿತರು ಚಾಸಾ.1 ನೆದ್ದವರಿಗೆ ಬೈಯುತ್ತಿರುವಾಗ, ಸದರಿಯವರು ಟ್ರಾಕ್ಟರನಿಂದ ಕೆಳಗೆ ಇಳಿದು ಯಾಕೆ ಬೈಯುತ್ತಿದ್ದೀರಿ ಈ ದಾರಿ ಮೇಲೆ

ಬಹಳ ದಿನಗಳಿಂದ ನಡೆದು ಬಂದಿದ್ದೇವೆ ಅಂತಾ ಅಂದಾಗ, ಆರೋಪಿ.1 ನೇದ್ದವನು ಅಲ್ಲಿಯೇ ಇದ್ದ ಬಡಿಗೆ ತೆಗೆದುಕೊಂಡು ಚಾಸಾ.1 ನೇದ್ದವನ ಎಡಗಾಲ ಪಾದಕ್ಕೆ ಹಾಗೂ ಬೆನ್ನಿಗೆ ಟೊಂಕಕ್ಕೆ ಬಲಗೈ ಹಸ್ತದ ಮೇಲೆ ಹೊಡೆದು ಗುಪ್ತಗಾಯ ಪಡಿಸಿರುತ್ತಾನೆ, ಆರೋಪಿ.2 ನೆದ್ದವನು ಈ ರಂಡಿ ಮಗನದು ಬಹಳ ಆಗ್ಯಾದ ಅಂತಾ ಬೈದು ಅಲ್ಲಿಯೇ ಬಿದಿದ್ದ ಚೂಪಾದ ಕಲ್ಲನ್ನು ತೆಗೆದುಕೊಂಡು ಚಾಸಾ.1 ನೇದ್ದವನ ಎಡ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಹಾಗೂ ಕೈಯಿಂದ ಹೊಡೆಬಡೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 324 ಮತ್ತು 323 ಸಹವಾಚಕ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿತರು ಚಾಸಾ.01 ನೇದ್ದವನಿಗೆ ಏ ರಂಡಿ ಮಗನೇ ತಿಪ್ಪಾ ಟ್ರಾಕ್ಟರದಿಂದ ಕೆಳಗಡೆ ಇಳಿ ಈ ದಾರಿ ಏನು ನಿಮ್ಮಪ್ಪಂದ ಬೊಸಡಿ ಮಗನೆ ಅಂತಾ ಹಾಗು ಆರೋಪಿ.2 ನೇದ್ದವನು ಈ ರಂಡಿ ಮಗನದು ಬಹಳ ಆಗ್ಯಾದ ಅಂತಾ ಅವಾಚ್ಯವಾಗಿ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ.3 ಮತ್ತು 4 ನೇದ್ದವರು ಈ ರಂಡಿ ಮಗನಿಗೆ ಬಿಡಬ್ಯಾಡರಿ ಖಲ್ಲಾಸ ಮಾಡಿರಿ ಜೀವ ಸಹಿತ ಬಿಡಬ್ಯಾಡರಿ ಅಂತಾ ಜೀವದ ಭಯ ಹಾಕಿದ್ದು, ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 10-12-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.549/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ಕೃಷ್ಣಾ ತಂದೆ ಬಸಪ್ಪ ಚಟ್ನಳಿ
ವಃ 31 ವರ್ಷ, ಉಃ ವ್ಯಾಪಾರ
ಸಾಃ ಉಡಗಿ, ತಾಃ ಸೇಡಂ,
ಜಿಃ ಕಲಬುರಗಿ ಹಾಗೂ ಇತರರು .

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-3

ಆ-4

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 10-12-2025 ಪ್ರ.ದ.ನ್ಯಾ.ದಂ. ಸೇಡಂ.